**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 5798/2023 ಸಿ.ಡಬ್ಲೂ.1 ಪಿ.ಡಬ್ಲೂ.1

ದಿನಾಂಕ 20-12-2025
ಸತ್ಯ ಪ್ರತಿಜ್ಞೆಯ ಮೇರೆಗೆ

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರಃ **ಶ್ರೀ ಎಮ್. ಎಸ್. ಎಚ್.** ವಕೀಲರಿಂದ:

ಸಾಕಷ್ಟು ಜನ ನರೆದ ಜಾಗಕ್ಕೆ ಸಂತೆ ಎನ್ನುತ್ತಾರೆ ಎಂದರೆ ಸರಿ. ಸಂಗ್ರಹಿಸಿಟ್ಟ ಸ್ಥಳದ ಸರ್ವೆ ನಂ. 96/2 ಇದ್ದು ಜಾಗದ ಪ್ಲಾಟ್ ಸಂಖ್ಯೆ ನನಗೆ ದಾಖಲೆಗಳು ಸಿಗದ ಕಾರಣ ಹೇಳಲು ಬರುವುದಿಲ್ಲ. ಸುತ್ತುಮುತ್ತಲಿನ ಜಾಗದ ಸಂಖ್ಯೆಯನ್ನು ನನಗೆ ಹೇಳಲು ಬರುವುದಿಲ್ಲ. ನಾನು ಪುರಾವಣೆ ಹೇಳಿಕೆಯನ್ನು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ಸದರಿ ಸ್ಥಳದ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿರುತ್ತೇವೆ ಎಂದು ತಿಳಿಸಿದ್ದು ಸದರಿ ದಾಖಲೆಗಳ ಆಧಾರದ ಮೇಲೆ ನೀಡಿರುತ್ತೇನೆ. ನಾನು ಬಾಡಿಗೆ ಕರಾರು ಪತ್ರವನ್ನು ನೋಡಿ ಹೇಳಿಕೆಯನ್ನು ನೀಡಿರುತ್ತೇನೆ. ಬಾಡಿಗೆ ಕರಾರು ಪತ್ರದಲ್ಲಿ ಮನೆ ಸಂಖ್ಯೆ ಮತ್ತು ಖಾಲಿ ನಿವೇಶನ ಎಂದು ನಮೂದು ಇದ್ದು ಯಾವುದನ್ನು ನೋಡಿ ಧೃಡಿಕರಣ ನೀಡಿರುತ್ತೀರಿ ಎಂದರೆ ಸಾಕ್ಷಿಯು ಮನೆಯ ಸಂಖ್ಯೆಯನ್ನು ನೋಡಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ ಸದರಿ ಬಾಡಿಗೆ ಕರಾರು ಪತ್ರವು ಖಾಲಿ ನಿವೇಶನಕ್ಕೆ ಸಂಬಂದಿಸಿದ್ದು ಎಂದರೆ ಸರಿಯಲ್ಲ. ಸದರಿ ಬಾಡಿಗೆ ಕರಾರು ಪತ್ರದಲ್ಲಿ ಸಾಕ್ಷಿದಾರರ ಹೆಸರು ನಮೂದು ಮಾಡದ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ಸದರಿ ಸರ್ವೆ ನಂಬರಿನಲ್ಲಿ ಪ್ಲಾಟ್‌ಗಳನ್ನು ಮಾಡಿ ಮಾರಟ ಮಾಡಿದ ಬಗ್ಗೆ ಪಂಚಾಯಿತಿ ಕಚೇರಿಯಲ್ಲಿ ವಿಚಾರಣೆ ಮಾಡಿರುತ್ತೇನೆ ಆದರೆ ನನಗೆ ಮಾಹಿತಿ ಸಿಕ್ಕಿರುವುದಿಲ್ಲ. ಕಂದಾಯ ದಾಖಲೆಗಳ ಪ್ರಕಾರ ಸದರಿ ಸರ್ವೆ ನಂಬರಿನ ಪೂರ್ಣ ಜಮೀನಿನಲ್ಲಿ ತೋಗರಿ ಬೇಳೆ ಇರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರ ಸರಿ ಆದ್ದರಿಂದ ಸದರಿ ಜಾಗದಲ್ಲಿ ಯಾವುದೇ ನಿವೇಶನ ಇಲ್ಲ ಎಂದರೆ ಸಾಕ್ಷಿಯು ಸದರಿ ಜಾಗದಲ್ಲಿ ನಿವೇಶನ ಇದ್ದು ಅದು ಸದರಿ ದಾಖಲೆಗಳಲ್ಲಿ ನಮೂದು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಸ್ಥಳ ಪರಿಶೀಲನೆ ಸಮಯಕ್ಕೆ ಮಾತ್ರ ಘಟನಾ ಸ್ಥಳಕ್ಕೆ ಹೋಗಿದ್ದು ಮತ್ತೇ ಯಾವತ್ತೂ ಹೋಗಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಘಟನಾ ಸ್ಥಳವು ಉರ್ದು ಶಾಲೆಯ ಹತ್ತಿರ ಇರುತ್ತದೆ ಎಂದು ಹೇಳಿದ್ದು ಪಂಚನಾಮೆ ನಕಾಶೆಯಲ್ಲಿ ಎಲ್ಲಿಯೂ ಕೂಡ ಉರ್ದು ಶಾಲೆ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯೂ ಸ್ವಲ್ಪ ದೂರದಲ್ಲಿ ಇತ್ತು ಎಂದು ನುಡಿಯುತ್ತಾರೆ. ಸದರಿ ಜಾಗದಲ್ಲಿ ನಾನು ಹೇಳಿದಂತ ಯಾವುದೇ ಸ್ಥಳ ಇರುವುದಿಲ್ಲ ಎಂದರೆ ಸರಿಯಲ್ಲ ನಾನು ನನ್ನ ಹೇಳಿಕೆಯನ್ನು ದಿಃ 09.07.2023 ರಂದು ಮದ್ಯಹ್ನಾ ಸಮಯದಲ್ಲಿ ನೀಡಿರುತ್ತೇನೆ ಸಮಯ ನನಗೆ ನೆನಪಿರುವುದಿಲ್ಲ ಆ ದಿನ ನಾನು ಕರ್ತವ್ಯದಲ್ಲಿ ಇದ್ದೆ ಎಂದರೆ ಸರಿ. ಆ ದಿನ ರವಿವಾರ ಇದ್ದ ಕಾರಣ ನಾನು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಯಾವುದಾದರೂ ಕೆಲಸ ಇದ್ದರೆ ಬರಬೇಕಾಗುತ್ತದೆ ಎಂದು ನುಡಿಯತ್ತಾರೆ. ರಜೆಯ ದಿನ ಕೆಲಸ ಮಾಡಬೇಕಾದರೆ ಮೇಲಾಧಿಕಾರಿಗಳ ಪರವಾನಿಗೆಯನ್ನು ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿಯು ಮೌಖಿಕವಾಗಿ ಪರವಾನಿಗೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಯಾವುದೇ ಪರವಾನಿಗೆಯನ್ನು ಪಡೆಯದೇ ಪೋಲಿಸರ ಮಾತು ಕೇಳಿಕೊಂಡು ಈ ಪ್ರಕರಣಕ್ಕೆ ಸಹಾಯ ಆಗಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ನಾನು ಸದರಿ ಪ್ರಕರಣಕ್ಕೆ ಸಂಬಂದಿಸಿದಂತೆ ಹೊರತುಪಡಿಸಿ ಬೇರೆ ಯಾವತ್ತೂ ಘಟನಾ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ